# ಶ್ರೀಮಾತೆ ಮತ್ತು ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು



**ಮಾತಾ ತ್ಯಾಗಮಯೀ**

'ಸಂಘಜನನಿ'ಯೆಂದೇ ಕರೆಯಲ್ಪಟ್ಟ ಶ್ರೀಮಾತೆಯವರು ನಿಜಕ್ಕೂ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳ ಪಾಲಿಗೆ ತಾಯಿಯೇ ಆಗಿದ್ದರು. ಶ್ರೀರಾಮಕೃಷ್ಣರ ನೇರ ಶಿಷ್ಯರು ಅವರನ್ನು ಜಗನ್ಮಾತೆಯೆಂದೇ ಕಂಡಿದ್ದರು; ಶ್ರೀಮಾತೆ ಅವರ ಐಹಿಕ, ಪಾರಮಾರ್ಥಿಕ ಜೀವನದ ಸಂರಕ್ಷಕಿಯಾಗಿದ್ದರು. ಈ ಕುರಿತು ವಿವೇಚಿಸಿರುವ ಲೇಖಕಿ ಚಳ್ಳಕೆರೆ ಶ್ರೀ ಶಾರದಾಶ್ರಮದ ಮುಖ್ಯಸ್ಥರು. ಉತ್ತಮ ಬರಹಗಾರರೂ, ಅನುವಾದಕರೂ, ವಾಗ್ಮಿಯೂ ಆಗಿರುವ ಅವರು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

''ಎಲ್ಲಿಂದಲೋ ಒಂದು ಗಾಯಕರ ಮೇಳದವರು ಬಂದರು, ಹಾಡಿದರು, ಕುಣಿದರು. ಬಳಿಕ ಹೇಗೆ ಬಂದರೋ ಹಾಗೇ ಇದ್ದಕ್ಕಿದ್ದಂತೆ ಮಾಯವಾದರು. ಅವರು ಬರುತ್ತಾರೆ, ಹೊರಟು ಹೋಗುತ್ತಾರೆ.ಆದರೆ ಯಾರೂ ಅವರನ್ನು ಗುರುತಿಸುವುದಿಲ್ಲ.'' — ಶ್ರೀರಾಮಕೃಷ್ಣರು ತಮ್ಮ ರಹಸ್ಯವನ್ನು ಹೀಗೆ ಹೊರಗೆಡವುತ್ತಾರೆ. ಇನ್ನೊಂದೆಡೆ ಹೇಳುತ್ತಾರೆ, ''ನದೀದಡದಲ್ಲಿ ಅಂತರಗಂಗೆಯ ಬಳ್ಳಿ ಹರಡಿಕೊಂಡಿರುತ್ತದೆ. ಅವುಗಳಲ್ಲಿ ಒಂದು ಬಳ್ಳಿಯನ್ನು ಹಿಡಿದು ಎಳೆದರೆ ಎಲ್ಲವೂ ಬಂದುಬಿಡುತ್ತದೆ.'' ಹಾಗೆ ತಾವು ಆಗಮಿಸಿದಾಗ ತಮ್ಮೊಂದಿಗೆ ಅಂತರಂಗಿಗಳು ಬರಲೇ ಬೇಕಾಗುತ್ತದೆ.

ಹಾಗೆ ಆಗಮಿಸಿದಾಗ ಅವರನ್ನು ನಾವು ಗುರುತಿಸಲಾರೆವು. ಆದರೆ ಅವರ ನಡುವಿನ ಪರಸ್ಪರರ ಸಂಬಂಧ, ಅವರು ಪರಸ್ಪರರನ್ನು ಅರ್ಥಮಾಡಿಕೊಂಡ ಬಗೆ ಬಹಳ ಸ್ವಾರಸ್ಯಕರವಾದುದು.

ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆಯವರ ದೈವೀ ಸಂಬಂಧವನ್ನು ಕುರಿತು ನಾವು ಸಾಕಷ್ಟು ವಿವೇಚಿಸಿದ್ದೇವೆ. ಆದರೆ ಶ್ರೀಮಾತೆಯವರು ಮತ್ತು ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರ ಪರಸ್ಪರ ಸಂಬಂಧದ ಬಗ್ಗೆ ನಾವು ಹೆಚ್ಚು ಆಲೋಚಿಸಿದಂತಿಲ್ಲ.

ಶ್ರೀಮಾತೆಯವರು ಮತ್ತು ಸ್ವಾಮಿ ವಿವೇಕಾನಂದರು ಪರಸ್ಪರರನ್ನು ಹೇಗೆ ಅರ್ಥಮಾಡಿಕೊಂಡಿದ್ದರು? ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ''ಶ್ರೀಮಾತೆಯವರು ಬಗಲಾ ಅವತಾರ. ಈ ಬಾರಿ ಅವರು ಸರಸ್ವತಿಯ ರೂಪದಲ್ಲಿ ಆಗಮಿಸಿದ್ದಾರೆ. ಬಹಿರಂಗದಲ್ಲಿ ಅವರದು ಪರಮಶಾಂತಿ, ಆದರೆ ಅಂತರಂಗದಲ್ಲಿ ಅವರದು ದುಷ್ಟವಿನಾಶಿನಿಯಾದ ರುದ್ರ ಶಕ್ತಿ.'' ಸ್ವಾಮೀಜಿ ವಿದೇಶದಿಂದ ಮರಳಿದ ತರುವಾಯ, ಅವರು ಶ್ರೀಮಾತೆಯವರನ್ನು ಭೇಟಿಯಾಗಲು ಹೊರಟಾಗ ಬಾರಿಬಾರಿಗೂ ಗಂಗೆಯಲ್ಲಿ ಮೀಯುತ್ತಿದ್ದರು. ವಿದೇಶದಲ್ಲಿ ತಾವು ಎಲ್ಲ ಬಗೆಯ ಜನಗಳೊಂದಿಗೆ ಬೆರೆತು ತಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಪಾವಿತ್ರ್ಯವನ್ನು ಕಳೆದುಕೊಂಡಿರುವೆನೆಂಬ ಭಾವನೆಯಿಂದ ಅವರಿಗೆ ಪರಮ ಪವಿತ್ರತಾ ಸ್ವರೂಪಿಣಿಯಾದ ಶ್ರೀಮಾತೆಯವರ ಬಳಿ ಹೋಗಲು ಹಿಂಜರಿಕೆ! ಅವರು ಶ್ರೀಮಾತೆಯವರ ಮನೆ ಬಾಗಿಲಿನಲ್ಲಿ ನಿಂತು ಭಾವವಿಭೋರರಾಗುತ್ತಿದ್ದರು. ಅಂತಹ ಒಂದು ಸಂದರ್ಭದಲ್ಲಿ ಶ್ರೀಮಾತೆಯವರೇ ಅವರ ಕೈಹಿಡಿದು ಮನೆಯೊಳಗೆ ಕರೆದುಕೊಂಡು ಹೋಗಿದ್ದರು.[೧] ತಾಯಿಯ ಕೃಪೆಯಾದರೆ ಅವಳ ಈ ಭೂತಗಣಗಳು (ತಮ್ಮನ್ನು ಉದ್ದೇಶಿಸಿ) ಏನನ್ನು ಮಾಡುವುದಕ್ಕೂ ಸಿದ್ಧ — ಎನ್ನುತ್ತಾರೆ ಸ್ವಾಮೀಜಿ.

ಇನ್ನು ಶ್ರೀಮಾತೆಯವರು ಹೇಳುತ್ತಾರೆ, ''ನರೇನ್ ಶ್ರೀರಾಮಕೃಷ್ಣರ ಉಪಕರಣ. ಅವನ ಮೂಲಕ ಶ್ರೀರಾಮಕೃಷ್ಣರ ಇಚ್ಛೆ ಕೆಲಸ ಮಾಡುತ್ತಿದೆ.'' ಸ್ವಾಮೀಜಿಯವರ ಮಹಾಸಮಾಧಿಯ ತರುವಾಯ ಶ್ರೀಮಾತೆಯವರನ್ನು ಭೇಟಿಯಾಗಲು ಪೂರ್ವ ಬಂಗಾಳದಿಂದ ಒಂದು ಭಕ್ತರ ಗುಂಪು ಆಗಮಿಸಿತ್ತು. ಅವರು ತಮ್ಮ ವೇದಿಕೆಯಲ್ಲಿ ಶ್ರೀರಾಮಕೃಷ್ಣ-ಶ್ರೀಮಾತೆಯವರಿಗೆ ಸರಿಸಮವಾಗಿ ಸ್ವಾಮೀಜಿಯವರ ಭಾವಚಿತ್ರವನ್ನಿರಿಸಿ ಪೂಜಿಸು

---

೧ *Reminiscences of Sri Sarada Devi,* ಪು. ೯



ತ್ತಿದ್ದರು. ಶಿಷ್ಯನಾದ ಸ್ವಾಮೀಜಿಯವರನ್ನು ಗುರುವಿಗೆ ಸಮನಾಗಿ ಕೂರಿಸುವುದೆಂದರೇನು? ಇದು ಅನೇಕರ ಆಪಾದನೆ. ಇದಕ್ಕೆ ಶ್ರೀಮಾತೆಯವರ ಪ್ರತಿಕ್ರಿಯೆ ಏನಿರಬಹುದು ಎಂಬ ಕುತೂಹಲ ಬೇರೆ. ಆ ಭಕ್ತರು ಬಹಳ ಹಿಂಜರಿಯುತ್ತಲೇ ತಾವು ಸ್ವಾಮೀಜಿಯವರನ್ನು ಶ್ರೀರಾಮಕೃಷ್ಣರಿಗೆ ಸರಿಸಮನಾಗಿ ಪೂಜಿಸುತ್ತಿರುವುದಾಗಿ ಹೇಳಿದರು. ಇದ್ದಕ್ಕಿದ್ದಂತೆ ಶ್ರೀಮಾತೆಯವರು ಗಂಭೀರರಾದರು. ''ಶ್ರೀರಾಮಕೃಷ್ಣರು ಬದುಕಿದ್ದರೆ ಇದಕ್ಕೆ ಅನುಮತಿ ನೀಡುತ್ತಿದ್ದರೇನು?'' ಎಂದು ಉದ್ಗರಿಸಿದರು. ಭಕ್ತರೆಲ್ಲ ಹೆದರಿ ನಡುಗಿದರು. ಆದರೆ ಶ್ರೀಮಾತೆಯವರು ತಮ್ಮ ಮಾತಿಗೆ ಪೂರ್ಣವಿರಾಮವಿತ್ತಿರಲಿಲ್ಲ. ''ಶ್ರೀರಾಮಕೃಷ್ಣರು ಬದುಕಿದ್ದರೆ ನರೇಂದ್ರನನ್ನು ತಮ್ಮ ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳುತ್ತಿದ್ದರು'' – ಎಂದರು. ಈಗ ಭಕ್ತರ ಭಯವೆಲ್ಲ ಪ್ರೇಮಾಶ್ರುವಾಗಿ ಬದಲಾಯಿತು. [೨]

ಶ್ರೀಮಾತೆಯವರು ಮತ್ತು ಸ್ವಾಮಿ ಬ್ರಹ್ಮಾನಂದರು ಪರಸ್ಪರರನ್ನು ಹೇಗೆ ಕಂಡಿದ್ದರು? ಸ್ವಾಮಿ ಬ್ರಹ್ಮಾನಂದರು ಒಂದು ಸಂದರ್ಭದಲ್ಲಿ ಬಲರಾಮ ಬೋಸ್‌ನ ಮನೆಯಲ್ಲಿದ್ದರು. ಶ್ರೀಮಾತೆಯವರು ಉದ್ಬೋಧನದಲ್ಲಿದ್ದರು. ಸ್ವಾಮಿ ಪ್ರೇಮೇಶಾನಂದಜಿಯವರು ಬರೆಯುತ್ತಾರೆ, ''ಆದರೂ ಅವರು ಶ್ರೀಮಾತೆಯವರ ದರ್ಶನಕ್ಕೆ ಹೋಗುತ್ತಿದ್ದುದು ಅಪರೂಪ. ಹಾಗೆ ಹೋದರೂ ಅವರಿಗೆ ಶ್ರೀಮಾತೆಯವರ ಸನ್ನಿಧಾನದಲ್ಲಿ ಹೆಚ್ಚು ಹೊತ್ತು ಇರಲು ಸಾಧ್ಯವಾಗುತ್ತಿರಲಿಲ್ಲ. ಅವರು ಶ್ರೀಮಾತೆಯವರ ಸನ್ನಿಧಾನದಲ್ಲಿದ್ದಾಗ ಅವರ ದೇಹ ಕಂಪಿಸುತ್ತಿತ್ತು. ಆ ರಹಸ್ಯವನ್ನು ನಾವು ಅರ್ಥಮಾಡಿಕೊಳ್ಳಲಾರೆವು.''

ಸ್ವಾಮಿ ಈಶಾನಾನಂದಜಿಯವರು ಹೇಳುತ್ತಾರೆ: ''ಅಂದು ಬೆಳಿಗ್ಗೆ ೯.೦೦ ಗಂಟೆಗೆ ಮಹಾರಾಜ್ 'ಉದ್ಬೋಧನ'ಕ್ಕೆ ಆಗಮಿಸಿದರು. ಶ್ರೀಮಾತೆಯವರು ಮೈತುಂಬ ವಸ್ತ್ರವನ್ನು ಹೊದ್ದುಕೊಂಡು ಮಂಚದ ಮೇಲೆ ಕಾಲುಗಳನ್ನು ಕೆಳಗೆ ಇರಿಸಿ ಕುಳಿತುಕೊಂಡರು. ಸ್ವಾಮಿ ಶಾರದಾನಂದರ ಕೋಣೆಯಲ್ಲಿದ್ದ ಮಹಾರಾಜರನ್ನು ಕರೆಯುವಂತೆ ಸೂಚನೆಯಿತ್ತರು. ಮಹಾರಾಜ್ ಮೆಟ್ಟಿಲುಗಳನ್ನು ಹತ್ತಿಕೊಂಡು ಬರುವಾಗ ಅವರ ಕಾಲುಗಳು ನಡುಗುತ್ತಿದ್ದವು. ಮಹಾರಾಜ್ ಶ್ರೀಮಾತೆಯವರಿಗೆ ಉದ್ದಂಡ ಪ್ರಣಾಮವನ್ನು ಮಾಡಿದರು. ಅವರ ಪಾದಧೂಳಿಯನ್ನು ತೆಗೆದುಕೊಂಡರು. ಬಳಿಕ ಒಂದೆರಡು ಮಾತುಗಳಷ್ಟೇ. ಶ್ರೀಮಾತೆಯವರು ಬಂಗಾಳಿ ಪದ್ಧತಿಯಂತೆ ಅವರ ಗದ್ದವನ್ನು ತಮ್ಮ ಕೈಗಳಿಂದ ಸ್ಪರ್ಶಿಸಿ, ಕೈಯನ್ನು ತಮ್ಮ ತುಟಿಗೆ ಒತ್ತಿಕೊಂಡರು, ಅವರ ಶಿರವನ್ನು ಸ್ಪರ್ಶಿಸಿ ಆಶೀರ್ವದಿಸಿದರು. ಅವರು ಕೂಡಲೇ ಕೋಣೆಯಿಂದ ಹೊರಹೋದರು. ಅವರು ಸ್ವಾಮಿ ಶಾರದಾನಂದಜಿಯವರ ಕೋಣೆಗೆ ಹೋಗಿ ಕುಳಿತುಕೊಂಡರು. ಶ್ರೀಮಾತೆಯವರು ಬಿಸ್ಕತ್ತು, ಕಿತ್ತಳೆಹಣ್ಣು ಮತ್ತು ಮಿಠಾಯಿಗಳನ್ನು ಜೋಡಿಸಿದ ಒಂದು ತಟ್ಟೆಯಿಂದ ಸ್ವಲ್ಪ ಭಾಗವನ್ನು ತಾವು ಸೇವಿಸಿ, ಅದನ್ನು ಪ್ರಸಾದವಾಗಿಸಿ ಮಹಾರಾಜರಿಗೆಂದು ಕಳುಹಿಸಿದರು. ಸ್ವಾಮಿ ಬ್ರಹ್ಮಾನಂದರು ಅತ್ಯಂತ ಆನಂದದಿಂದ ಅದನ್ನು ಸ್ವಾಮಿ ಶಾರದಾನಂದಜಿಯವರೊಂದಿಗೆ ಹಂಚಿಕೊಂಡು ಸೇವಿಸಿದರು. [೩]

ಶ್ರೀಮಾತೆಯವರು ವಾರಣಾಸಿಯಲ್ಲಿದ್ದಾಗ ಸ್ವಾಮಿ ಬ್ರಹ್ಮಾನಂದರು ಅಲ್ಲಿದ್ದರು. ಅವರು ಪ್ರತಿದಿನ ಬೆಳಿಗ್ಗೆ ಶ್ರೀಮಾತೆಯವರ ದರ್ಶನಕ್ಕೆ ಬರುತ್ತಿದ್ದರು. ಅಂದು ಬ್ರಹ್ಮಾನಂದರು ಬಂದಿದ್ದಾಗ ಗೋಲಾಪ್ ಮಾ, ಕೇಳಿದರು, ''ಶ್ರೀಮಾತೆಯವರು ನಿಮ್ಮನ್ನು ಕೇಳುತ್ತಿದ್ದಾರೆ, ಮೊದಲು ಶಕ್ತಿಪೂಜೆಯನ್ನು ಮಾಡಲು ಕಾರಣವೇನು– ಎಂದು.'' ಬ್ರಹ್ಮಾನಂದರು ಉತ್ತರಿಸಿದರು: ''ಏಕೆಂದರೆ, ಬ್ರಹ್ಮಜ್ಞಾನದ ಕೀಲಿಕೈ ಇರುವುದು ಆದ್ಯಾಶಕ್ತಿಯಾದ ಜಗನ್ಮಾತೆಯ ಕೈಯಲ್ಲಿ. ಜಗನ್ಮಾತೆ ಕೃಪೆಮಾಡಿ ಬಾಗಿಲು ತೆರೆಯದಿದ್ದರೆ ಬೇರೆ ದಾರಿಯೇ ಇಲ್ಲ.'' ಈ ಅರ್ಥದ ಒಂದು ಹಾಡನ್ನು ಹಾಡುತ್ತ ಹಾಡುತ್ತ ಅವರ ಮನಸ್ಸು ಆನಂದ ತನ್ಮಯವಾಯಿತು. ಆನಂದದ ಭರದಲ್ಲಿ ಅವರು ನರ್ತಿಸತೊಡಗಿದರು. ನರ್ತಿಸುತ್ತ ನರ್ತಿಸುತ್ತ ಆನಂದಾತಿರೇಕದಿಂದ ಗಟ್ಟಿಯಾಗಿ 'ಹೋ ಹೋ ಹೋ' ಎಂದು ಕೂಗುತ್ತ ಅಲ್ಲಿಂದ ವೇಗವಾಗಿ ಹೊರಟುಹೋದರು. ಮಹಡಿಯ ಮೇಲೆ ನಿಂತು ಇವನ್ನೆಲ್ಲ ನೋಡುತ್ತಿದ್ದ ಶ್ರೀಮಾತೆಯವರು ಅತೀವ ಸಂಪ್ರೀತರಾದರು.[೪]



ಸ್ವಾಮಿ ಬ್ರಹ್ಮಾನಂದರು ಸ್ವಾಮಿ ಶುದ್ಧಾನಂದರಿಗೆ ಹೇಳಿದ್ದರು: ''ಸುಧೀರ, ನಾನು ನಿನಗೆ ಈ ಕ್ಷಣ ಸಮಾಧಿಯನ್ನು ಕೊಡಬಲ್ಲೆ. ಆದರೆ ಶ್ರೀಮಾತೆಯವರು ಅದನ್ನು ನನಗಿಂತ ಹೆಚ್ಚು ಸುಲಭವಾಗಿ, ಪರಿಣಾಮಕಾರಿಯಾಗಿ ಮಾಡಬಲ್ಲರು.'' [೫]

ಸ್ವಾಮಿ ಅಭೇದಾನಂದರು '**ಪ್ರಕೃತಿಂ ಪರಮಾಂ ಅಭಯಾಂ ವರದಾಂ**' ಎಂದು ಆರಂಭವಾಗುವ ಶ್ರೀ ಶಾರದಾದೇವಿ ಸ್ತೋತ್ರವನ್ನು ರಚಿಸಿದವರು. ಅವರಿಗೆ ಅದನ್ನು ಶ್ರೀಮಾತೆಯವರ ಸನ್ನಿಧಿಯಲ್ಲಿ ಓದಿ ಹೇಳಬೇಕೆನ್ನಿಸಿತು. ಅವರು ಅದನ್ನು ಶ್ರೀಮಾತೆಯವರೆದುರು ವ್ಯಕ್ತಪಡಿಸಿದಾಗ ಅವರು ಬೆರಗಾದರು.

''ಸ್ತೋತ್ರ? ಯಾರನ್ನು ಕುರಿತು?'' ಶ್ರೀಮಾತೆಯವರು ಕೇಳಿದರು.

---

೨ *Our Mother in Many forms,* ಪು. ೨೭

೩ *Sri Sarada Devi And Her Divine Play* ಪು. ೩೮೫

೪ ಶ್ರೀಶಾರದಾದೇವಿ ಜೀವನಗಂಗಾ, ಪು. ೩೩೬


೫ *Sri Sarada Devi And Her Divine Play* ಪು. ೩೯೧



''ಅಮ್ಮಾ, ತಮ್ಮನ್ನು ಕುರಿತು'' ಎಂದರು ಅಭೇದಾನಂದರು.

''ಮಗು, ನನಗೆ ಸ್ತೋತ್ರದ ಅಗತ್ಯ ವೇನಿದೆ?'' ಎಂದರು ಶ್ರೀಮಾತೆ.

ಮೊದಲು ಅವರು ಸ್ತೋತ್ರವನ್ನು ಕೇಳಲು ಒಪ್ಪಲಿಲ್ಲ. ಬಳಿಕ ಶಿಷ್ಯನ ಕಾತರದ ಪ್ರಾರ್ಥನೆಯನ್ನು ಮನ್ನಿಸಿ ಶಾಂತ, ಗಂಭೀರ ಭಾವದಿಂದ ಸ್ತೋತ್ರವನ್ನು ಆಲಿಸಲು ಕುಳಿತರು. **'ಪ್ರಕೃತಿಂ ಪರಮಾಂ ಅಭಯಾಂ ವರದಾಂ...**' ಎಂದು ಮುಂದುವರಿಸುತ್ತಾ ಅಭೇದಾನಂದರು '**ರಾಮಕೃಷ್ಣಗತಪ್ರಾಣಾಂ**' ಎಂದು ಉಚ್ಚರಿಸಿದಾಗ ಅಲ್ಲಿ ಶ್ರೀಮಾತೆಯವರು ಸ್ಥಿರರಾದರು. **ತನ್ನಾಮಶ್ರವಣಪ್ರಿಯಾಂ** ಎಂದು ಹೇಳಿದಾಗ ಅಲ್ಲಿ ಶ್ರೀಮಾತೆಯವರು ಇರಲಿಲ್ಲ, ಅವರು ಸಮಾಧಿಸ್ಥರಾಗಿದ್ದರು. ಶ್ರೀರಾಮಕೃಷ್ಣರೇ ಅಲ್ಲಿ ಕುಳಿತಿದ್ದರು. ಶ್ರೀಮಾತೆಯವರು ರಾಮಕೃಷ್ಣರೇ ಆದರು. ಶ್ರೀಮಾತೆಯವರ ಪಾದಗಳಲ್ಲಿ ಕುಳಿತು ಸ್ತೋತ್ರವನ್ನು ಹೇಳುತ್ತಿದ್ದ ಅಭೇದಾನಂದರೂ ಸಮಾಧಿಸ್ಥರಾದರು. ಆ ಕ್ಷಣದ ತಮ್ಮ ಅನುಭವವನ್ನು ಅವರು ಹೇಳಲಿಲ್ಲ.[೬]



ಶ್ರೀಮಾತೆಯವರು 'ಉದ್ಬೋಧನ' ದಲ್ಲಿದ್ದಾಗ ಸ್ವಾಮಿ ಪ್ರೇಮಾನಂದರು ಪ್ರತಿಯೊಂದು ವಿಷಯದಲ್ಲೂ ಅವರ ಅನುಮತಿಯನ್ನು ಪಡೆದುಕೊಂಡೇ ಮಾಡುತ್ತಿದ್ದರು. ೧೯೧೪ರಲ್ಲಿ ಅವರನ್ನು ಮಾಲ್ದಾದಲ್ಲಿ ಶ್ರೀರಾಮಕೃಷ್ಣರ ಉತ್ಸವಕ್ಕೆ ಆಮಂತ್ರಿಸಲಾಗಿತ್ತು. ಅದಕ್ಕೆ ಶ್ರೀಮಾತೆಯವರ ಅನುಮತಿಯನ್ನು ಕೇಳಲು, ಸ್ವಾಮಿ ಪ್ರೇಮಾನಂದರು ಆಗತಾನೆ ಅನಾರೋಗ್ಯದಿಂದ ಚೇತರಿಸಿಕೊಂಡಿದ್ದರಿಂದ ಅವರು ಒಪ್ಪಿಗೆಯನ್ನು ನೀಡಲಿಲ್ಲ. ಭಕ್ತರು ಒಗ್ಗೂಡಿ ಮತ್ತೆ ಶ್ರೀಮಾತೆಯವರನ್ನು ಒತ್ತಾಯಿಸಿದಾಗ ಅವರು ಪ್ರೇಮಾನಂದರ ಅಭಿಪ್ರಾಯವನ್ನು ಕೇಳಿದರು. ಸ್ವಾಮಿ ಪ್ರೇಮಾನಂದರು ಭಾವವಿಭೋರರಾಗಿ, ''ಅಮ್ಮಾ, ನನಗೆ ಏನು ತಾನೆ ಗೊತ್ತಿದೆ? ನಾನು ಕೇವಲ ನಿಮ್ಮ ಆದೇಶವನ್ನು ಪಾಲಿಸುತ್ತೇನೆ. ನೀವು ನನಗೆ ಬೆಂಕಿಗೆ ಹಾರಲು ಹೇಳಿದರೆ ಬೆಂಕಿಗೆ ಹಾರುತ್ತೇನೆ. ನೀವು ನನಗೆ ನೀರಿಗೆ ಧುಮುಕಲು ಹೇಳಿದರೆ ಧುಮುಕುತ್ತೇನೆ. ನೀವು ನನಗೆ ನರಕಕ್ಕೆ ಹೋಗಲು ಹೇಳಿದರೆ ನರಕಕ್ಕೆ ಹೋಗುತ್ತೇನೆ. ನಾನು ಏನು ಬಲ್ಲೆ ಅಮ್ಮಾ?'' ಕೊನೆಗೆ ಶ್ರೀಮಾತೆಯವರು ಬೇಗ ಮರಳಿ ಬರಬೇಕೆನ್ನುವ ಶರತ್ತಿನ ಮೇಲೆ ಅನುಮತಿಯನ್ನಿತ್ತರು.[೭]

ಸ್ವಾಮಿ ಅಖಂಡಾನಂದರು ೧೮೯೭ರಲ್ಲಿ ಮುರ್ಷಿದಾಬಾದ್ ಜಿಲ್ಲೆಯಲ್ಲಿ ಬರಪರಿಹಾರ ಸೇವಾಕಾರ್ಯವನ್ನು ಆರಂಭಿಸಿದರು. ಅವರು ಹಸಿವು, ನಿದ್ರೆಯನ್ನು ಮರೆತು ಜೀವ-ಶಿವ ಸೇವೆಯಲ್ಲಿ ಅವಿಶ್ರಾಂತವಾಗಿ ಶ್ರಮಿಸಿದ್ದರಿಂದ ಅವರ ಆರೋಗ್ಯ ಕ್ಷೀಣಿಸಿತು. ಅವರಿಗೆ ಮಲೇರಿಯಾ ಜ್ವರ ಬಂದಿತು. ಸೋದರ ಸಂನ್ಯಾಸಿಗಳು ಅವರಿಗೆ ಔಷಧಿ ಪಥ್ಯ ಚಿಕಿತ್ಸೆಯನ್ನು ಪಡೆಯಲು ಹೇಳಿದರೂ ಅವರು ಗಮನವನ್ನೇ ಕೊಡಲಿಲ್ಲ. ಆಗ ಶ್ರೀಮಾತೆಯವರು ಅವರಿಗೆ ತಮ್ಮನ್ನು ಭೇಟಿಯಾಗುವಂತೆ ಆದೇಶಿಸಿದರು. ಅವರು ಒಡನೆಯೆ ಸಾರಗಾಛಿಯಿಂದ ಕಲ್ಕತ್ತಾಗೆ ಬಂದರು. ಉದ್ಬೋಧನಕ್ಕೆ ಹೋಗಿ ಶ್ರೀಮಾತೆಯವರಿಗೆ ಬಾಗಿ ನಮಿಸಿದರು. ಶ್ರೀಮಾತೆ ಹೇಳಿದರು: ''ನೀನು ಈಗ ಬಲರಾಮನ ಮನೆಯಲ್ಲಿದ್ದು ಆಯುರ್ವೇದ ಚಿಕಿತ್ಸೆಯನ್ನು ಪಡೆಯಬೇಕು. ಕವಿರಾಜ ಹೇಳಿದ ಎಲ್ಲಾ ಪಥ್ಯವನ್ನು ತಪ್ಪದೆ ಪಾಲಿಸಬೇಕು. ನನ್ನ ಅನುಮತಿಯಿಲ್ಲದೆ ನೀನು ಎಲ್ಲಿಗೂ ಹೋಗುವಂತಿಲ್ಲ.'' ಅಖಂಡಾನಂದರು ಪುಟ್ಟ ಬಾಲಕನಂತೆ ಒಪ್ಪಿಕೊಂಡರು. ಅವರು ಬಲರಾಮನ ಮನೆಯಲ್ಲಿದ್ದು ಆಯುರ್ವೇದ ಚಿಕಿತ್ಸೆಯನ್ನು ಪಡೆಯಲಾರಂಭಿಸಿದರು. ಆ ಸಂದರ್ಭದಲ್ಲಿ ಸ್ವಾಮಿ ಪ್ರೇಮಾನಂದರು ಅವರನ್ನು ಭೇಟಿಯಾಗಲು ಬಂದರು. ಅವರು ಒಂದು ದಿನಕ್ಕಾದರೂ ಬೇಲೂರು ಮಠಕ್ಕೆ ಬರುವಂತೆ ಅಖಂಡಾನಂದರನ್ನು ಒತ್ತಾಯಿಸಿದರು. ಅದಕ್ಕೆ ಅವರು, ''ಸೋದರ, ತಾಯಿ ನನಗೆ ಇಲ್ಲಿ ಇರುವಂತೆ ಹೇಳಿದ್ದಾರೆ. ಅವರ ಅನುಮತಿಯಿಲ್ಲದೆ ನಾನು ಎಲ್ಲಿಗೂ ಹೋಗಲಾರೆ'' ಎಂದರು. ಸ್ವಾಮಿ ಪ್ರೇಮಾನಂದರು ಉದ್ಬೋಧನಕ್ಕೆ ಹೋಗಿ ಶ್ರೀಮಾತೆಯವರ ಅನುಮತಿಯನ್ನು ಪಡೆದ ತರುವಾಯವೇ ಅವರು ಬೇಲೂರು ಮಠಕ್ಕೆ ಬಂದರು.[೮]

ಸ್ವಾಮಿ ಸುಬೋಧಾನಂದರು ಹೇಳುತ್ತಾರೆ: ''ಯಾವಾಗ ಶ್ರೀಮಾತೆಯವರು ನಿನ್ನ ಮೇಲೆ ಕೃಪೆ ತೋರಿದ್ದಾರೋ ಆಗಿನಿಂದಲೇ ನಿನ್ನ ವಿಧಿ ಬದಲಾಗಿದೆ ಎಂಬುದನ್ನು ದೃಢವಾಗಿ ನಂಬು. ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆಯವರು, ಯಾರಿಗೆ ತಮ್ಮ ನಿಜಸ್ವರೂಪವನ್ನು ತೋರಿಸಿದ್ದಾರೆಯೋ ಅವರಿಗೆ ಮಾತ್ರ ಅವರು ಯಾರೆಂದು ತಿಳಿದಿದೆ. ನೀನು ಶ್ರೀಮಾತೆಯವರನ್ನು ನಿನ್ನವರನ್ನಾಗಿ ಮಾಡಿಕೊಂಡಲ್ಲಿ ಮಾತ್ರ ಅವರ ಕೃಪೆಯಿಂದ ಎಲ್ಲವನ್ನೂ ಪಡೆಯುವೆ.''



ಒಮ್ಮೆ ಒಬ್ಬ ಶಿಷ್ಯ ಸ್ವಾಮಿ ಶಾರದಾನಂದರನ್ನು ಪ್ರಶ್ನಿಸಿದನು, ''ಶ್ರೀಮಾತೆಯವರು ಮಂತ್ರದೀಕ್ಷೆಯನ್ನು ಕೊಡಲು ಎರಡು ಮೂರು ನಿಮಿಷಗಳನ್ನು ತೆಗೆದುಕೊಳ್ಳುತ್ತಾರೆ. ನೀವು ಮಂತ್ರದೀಕ್ಷೆಯನ್ನು ಕೊಡಲು ಮೂವತ್ತು ನಿಮಿಷಕ್ಕಿಂತ ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತೀರಲ್ಲ?'' ಅದಕ್ಕೆ ಸ್ವಾಮಿ ಶಾರದಾ

---

೬ *Our Mother in Many forms,* ಪು. ೧೬

೭. *Sri Sarada Devi And Her Devine Play,* ಪು. ೩೮೮

೮. *Sri Sarada Devi And Her Divine Play,* ಪು. ೩೯೦

ನಂದರು ಉತ್ತರಿಸಿದರು: ''ಶ್ರೀಮಾತೆಯವರು ಇಚ್ಛಾಮಾತ್ರದಿಂದ, ಸ್ಪರ್ಶಮಾತ್ರದಿಂದ ಒಬ್ಬ ಶಿಷ್ಯನನ್ನು ಶ್ರೀರಾಮಕೃಷ್ಣರು ಸ್ವೀಕರಿಸುವಂತೆ ಮಾಡುತ್ತಾರೆ. ಆದರೆ ಅಂತಹ ಭರವಸೆಯನ್ನು ನಾನು ಶ್ರೀರಾಮಕೃಷ್ಣರಿಂದ ಪಡೆಯಲು ಸ್ವಲ್ಪ ಕಾಲ ಧ್ಯಾನ ಮಾಡಬೇಕಾಗುತ್ತದೆ.''

ಸ್ವಾಮಿ ತುರೀಯಾನಂದರು ಹೇಳುತ್ತಾರೆ: ''ಶ್ರೀಮಾತೆಯವರದು ಅದ್ಭುತ ಶಕ್ತಿ. ಅವರು ಲೋಕಸಂಗ್ರಹಕ್ಕಾಗಿ ಬದುಕುತ್ತಿದ್ದಾರೆ. ನಾವು ನಮ್ಮ ಮನಸ್ಸನ್ನು ವಿಶುದ್ಧಚಕ್ರಕ್ಕೆ ಏರಿಸಲು ಹೆಣಗಾಡುತ್ತೇವೆ. ಆದರೆ ಶ್ರೀಮಾತೆಯವರು ರಾಧಿಯ[೯] ಸಹಾಯದಿಂದ ತಮ್ಮ ಮನಸ್ಸನ್ನು ವಿಶುದ್ಧ ಚಕ್ರದಿಂದ ಮೇಲಕ್ಕೇರದಂತೆ ನೋಡಿಕೊಳ್ಳುತ್ತಿದ್ದಾರೆ. ಈ ರಹಸ್ಯವನ್ನು ಭೇದಿಸಲು ಸ್ವಲ್ಪ ಪ್ರಯತ್ನಿಸು! ತಾಯಿಗೆ ಜಯವಾಗಲಿ! ಆದ್ಯಾಶಕ್ತಿಗೆ ಜಯವಾಗಲಿ!''[೧೦]

ಸ್ವಾಮಿ ನಿರ್ಲೇಪಾನಂದರು ಬರೆಯುತ್ತಾರೆ:

''ಶ್ರೀರಾಮಕೃಷ್ಣರ ಶಿಷ್ಯರು ಶ್ರೀಮಾತೆಯವರಿಗೆ ಪ್ರಣಾಮಗೈಯಲು ಬಂದಾಗ, ಶ್ರೀಮಾತೆಯವರು ತಮ್ಮ ಸ್ವರೂಪದಲ್ಲಿ ಪ್ರತಿಷ್ಠಿತರಾಗುತ್ತಿದ್ದುದನ್ನು ನಾವು ಗಮನಿಸಿದ್ದೇವೆ. ಅವರು ತೆರಳಿದ ಮೇಲೆ ಶ್ರೀಮಾತೆಯವರಿಗೆ ಸಹಜ ಸ್ಥಿತಿಗೆ ಮರಳಲು ಸಮಯ ತೆಗೆದುಕೊಳ್ಳುತ್ತಿತ್ತು. ಅವರ ಪರಸ್ಪರ ಸಂಬಂಧವು ಆ ಭೂಮಿಕೆಯದಾಗಿತ್ತು.''[೧೧]

ಶ್ರೀಮಾತೆಯವರು ಮತ್ತು ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರ ಪರಸ್ಪರ ಸಂಬಂಧದ ನಮಗೆ ತಿಳಿದಿರುವ ದೃಶ್ಯಗಳಲ್ಲಿನ ಕೆಲವೇ ದೃಶ್ಯಗಳು ಇವು. ಇನ್ನು ನಮಗೆ ತಿಳಿಯದಿರುವ ಅಸಾಧಾರಣ ದೈವೀ ಘಟನೆಗಳು, ದೃಶ್ಯಗಳು, ಸನ್ನಿವೇಶಗಳು ಎಷ್ಟಿವೆಯೋ, ನಾವರಿಯೆವು.


---

೯. ರಾಧು ಅಥವಾ ರಾಧಿ — ಈಕೆ ಶ್ರೀಮಾತೆಯವರ ಕೊನೆಯ ತಮ್ಮ ಅಭಯನ ಮಗಳು. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಶ್ರೀಮಾತೆ ದುಃಖಾತಿರೇಕದಿಂದ ತಮ್ಮ ದೇಹವನ್ನೇ ಬಿಡಬೇಕೆಂದಿದ್ದರು. ಆಗ ಶ್ರೀರಾಮಕೃಷ್ಣರು ದರ್ಶನವಿತ್ತು ಒಬ್ಬಾಕೆ ಚಿಕ್ಕ ಹುಡುಗಿಯನ್ನು ತೋರಿಸಿ, ''ಇವಳು ಮಾಯೆ. ಇವಳ ಸಹಾಯದಿಂದ ದೇಹವನ್ನು ಹಿಡಿದಿಟ್ಟುಕೊಂಡಿರು'' ಎಂದರು. ಅವಳೇ ಮುಂದೆ ರಾಧುವಾಗಿ ಜನಿಸಿದಳು. ಮುಂದೆ ಶ್ರೀಮಾತೆಯವರು ಅವಳನ್ನು ಶ್ರೀರಾಮಕೃಷ್ಣರು ತೋರಿಸಿಕೊಟ್ಟ ಅದೇ ಹುಡುಗಿಯೆಂದು ಗುರುತಿಸಿದರು ಹಾಗೂ ಅವಳನ್ನು ಸಾಕುವ ಜವಾಬ್ದಾರಿಯನ್ನು ಹೊತ್ತುಕೊಂಡರು. ಅವಳಲ್ಲಿ ವಿಶೇಷ ಮಮತೆಯನ್ನು ಬೆಳೆಸುವ ಮೂಲಕ ಶ್ರೀಮಾತೆಯವರು ತಮ್ಮ ದೇಹವನ್ನು ಹಿಡಿದಿಟ್ಟುಕೊಂಡು, ತಮ್ಮ ಜೀವಿತದ ಉದ್ದೇಶವನ್ನು ಪೂರ್ತಿಗೊಳಿಸಿದರು.

೧೦. *Sri Sarada Devi And Her Divine Play,* ಪು. ೩೮೮

೧೧. ಸ್ವಾಮಿ ವಿಜ್ಞಾನಾನಂದರು ೧೯೧೩ರಲ್ಲಿ ಉದ್ಬೋಧನಕ್ಕೆ ಬಂದಿದ್ದರು. ನಾನು ಶರತ್ ಮಹಾರಾಜರ ಕೋಣೆಯಲ್ಲಿ ಕುಳಿತಿದ್ದೆನು. ನಾನು ಶ್ರೀಮಾತೆಯವರನ್ನು ದರ್ಶಿಸಲು ಅವರ ಕೋಣೆಗೆ ಹೋಗುವಾಗ ಒಂದೊಂದು ಮೆಟ್ಟಿಲನ್ನು ಹತ್ತಿದಂತೆಲ್ಲ ನನ್ನ ಹೃದಯದ ಒಂದೊಂದು ಪದ್ಮಗಳು ತೆರೆದು ಕುಂಡಲಿನಿ ಜಾಗ್ರತವಾಯಿತು. ನನ್ನ ದೇಹಮನಗಳು ಆನಂದಸಾಗರದಲ್ಲಿ ಲೀನವಾದವು.

# ಯುವಚೇತನ



ಆತ್ಮನಲ್ಲಿ ಏನಾದರೂ ಲಿಂಗಭೇದವಿದೆಯೇನು? ಗಂಡಸಿಗೂ ಹೆಂಗಸಿಗೂ ಇರುವ ಭೇದವನ್ನು ತ್ಯಜಿಸಿ. 'ಅಸ್ತಿ, ಅಸ್ತಿ' – ಎಲ್ಲವೂ ಇದೆ ಎಂದು ಧೈರ್ಯವಾಗಿ ಹೇಳಿ. ಸಕಾರಾತ್ಮಕವಾದ ಉತ್ತಮ ಭಾವಗಳನ್ನು ಮನಸ್ಸಿನಲ್ಲಿಡಿ. 'ನಾಸ್ತಿ, ನಾಸ್ತಿ'– ಇಲ್ಲ ಇಲ್ಲ ಎಂಬ ನಿಷೇಧಾರ್ಥವನ್ನು ಕೊಡುವ ಪದಗಳನ್ನು ಪಠಿಸಿ ಪಠಿಸಿ ದೇಶವೆಲ್ಲ ಅಧೋಗತಿಗೆ ಇಳಿಯುತ್ತಿದೆ. 'ಸೋಽಹಂ, ಸೋಽಹಂ, ಶಿವೋಽಹಂ' ಇದು ಎಷ್ಟು ಕಷ್ಟ! ಪ್ರತಿಯೊಂದು ಆತ್ಮನಲ್ಲಿಯೂ ಅನಂತ ಶಕ್ತಿ ನೆಲೆಸಿದೆ. ಯಾವಾಗಲೂ 'ಇಲ್ಲ ಇಲ್ಲ' ಎಂಬ ಭಾವವನ್ನು ಮನಸ್ಸಿನಲ್ಲಿಟ್ಟುಕೊಂಡು, ಬೆಕ್ಕು ನಾಯಿಗಳಂತೆ ಆಗಬೇಕೇನು ನೀವು? ಯಾರಿಗೆ ನಿಷೇಧವನ್ನು ಬೋಧಿಸುವುದಕ್ಕೆ ಧೈರ್ಯವಿದೆ? ಯಾರನ್ನು ದುರ್ಬಲರು, ಶಕ್ತಿಹೀನರು, ಎಂದು ಕರೆಯುವುದು? ಶಿವನೇ ನಾನು, ಶಿವನೇ ನಾನು. ಎಂದು ಜನರು ನಾಸ್ತಿ ಎಂಬ ಆಲೋಚನೆಗಳನ್ನು ಮೆಲ್ಲುತ್ತಾರೊ ಆಗ ನನ್ನ ತಲೆಗೆ ಒಂದು ಸಿಡಿಲು ಬಡಿದಂತೆ ಆಗುವುದು. ಆತ್ಮನಿಂದೆ ಮಾಡಿಕೊಳ್ಳುವುದು ಮತ್ತೊಂದು ರೋಗ. ಇದನ್ನು ನಮ್ರತೆ ಎಂದು ಕರೆಯುವಿರೇನು? ಇದು ಮರೆಮಾಚಿದ ಅಹಂಕಾರ. '**ನ ಲಿಂಗಂ ಧರ್ಮಕಾರಣಂ, ಸಮತಾ ಸರ್ವಭೂತೇಷು, ಏತನ್ಮುಕ್ತಸ್ಯ ಲಕ್ಷಣಂ**' – ಬಾಹ್ಯಾಡಂಬರವಲ್ಲ ಮುಕ್ತನ ಲಕ್ಷಣ. ಎಲ್ಲದರಲ್ಲಿರುವ ಸಮದೃಷ್ಟಿ ಜೀವನ್ಮುಕ್ತನ ಲಕ್ಷಣ. 'ಅಸ್ತಿ, ಅಸ್ತಿ, ಸೋಽಹಂ ಚಿದಾನಂದ ರೂಪಃ, ಶಿವೋಽಹಂ ಶಿವೋಽಹಂ.' ಇದೆ, ಇದೆ; ನಾನೇ ಅವನು – ಚಿದಾನಂದ ರೂಪನಾದ ಶಿವನು. **ನಿರ್ಗಚ್ಛತಿ ಜಗಜ್ಜಾಲಾತ್ ಪಿಂಜರಾದಿವ ಕೇಸರಿಃ** – ಸಿಂಹ ತನ್ನ ನಖದಿಂದ ಪಂಜರವನ್ನು ಸೀಳಿಬರುವಂತೆ, ಮಾಯಾಪ್ರಪಂಚದ ಬಂಧನಗಳನ್ನು ಅವನು ಸೀಳಿ ಬರುವನು. '**ನಾಯಮಾತ್ಮಾ ಬಲಹೀನೇನ ಲಭ್ಯಃ**' ಬಲಹೀನರಿಗೆ ಆತ್ಮಲಾಭವಾಗುವುದಿಲ್ಲ. ಮಹಾಹಿಮರಾಶಿಯ ಪರ್ವತವು ಮೇಲೆ ಬೀಳುವಂತೆ ಜಗದ ಮೇಲೆ ಬೀಳಿ. ನಿಮ್ಮ ಭಾರಕ್ಕೆ ಭೂಮಿ ಕುಸಿದು ಚೂರಾಗಲಿ. ''**ಹರ ಹರ ಮಹಾದೇವ!**'' '**ಉದ್ಧರೇದಾತ್ಮನಾತ್ಮಾನಂ**' ತನ್ನನ್ನು ತನ್ನಾತ್ಮನಿಂದಲೇ ಉದ್ಧರಿಸಿಕೊಳ್ಳಬೇಕು. ಪುರುಷಕಾರದ ಬಲದಿಂದ, ಸ್ವಪ್ರಯತ್ನದ ಸಾಹಸದಿಂದ ನಾವಿರುವ ಬಂಧನದಿಂದ ಪಾರಾಗಬೇಕು. *(ಕೃತಿಶ್ರೇಣಿ, ಸಂ.೪, ಪು.೧೮೧-೮೨)*